ವಿಷಯ : ಗುಲ್ಬರ್ಗಾ ಜಿಲ್ಲಾ ಆಳಂದ ಸಕ್ಕರೆ ಕಾರ್ಖಾನೆಯು ಕಬ್ಬು ಬೆಳೆಗಾರರಿಗೆ ಹಣ ನೀಡಿರುರುದು.

1447(1998)-ಶ್ರೀ ಠೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1994-95 ಹಾಗೂ 1995-96ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲಾ ಆಳಂದ ಸಕ್ಕರೆ ಕಾರ್ಖಾನೆಯು ಎಷ್ಟು ಜನ ಕಬ್ಬು ಬೆಳೆಗಾರರಿಗೆ ಎಷ್ಟು ಹಣ ನೀಡಲಾಗಿದೆ, ಹಾಗೂ ಇನ್ನೂ ಎಷ್ಟು ಜನರಿಗೆ ನೀಡಬೇಕಾಗಿದೆ. ಯಾವಾಗ ನೀಡಲಾಗುವುದು?

ಆ) ಈ ಸಕ್ಕರೆ ಕಾರ್ಖಾನೆಯಲ್ಲಿ ಒಟ್ಟು ಎಷ್ಟು ಖಾಲಿ ಚೀಲಗಳನ್ನು ಖರೀದಿಸಲಾಗಿದೆ ಹಾಗೂ ಯಾವ ಧಾರಣೆಯಲ್ಲಿ ಖರೀದಿ ಮಾಡಲಾಗಿದೆ ಮತ್ತು ಯಾರಿಂದ ಖರೀದಿ ಮಾಡಲಾಗಿದೆ (ವಿವರ ನೀಡುವುದು)

ಇ) ಇತರೆ ಯಾವ ಯಾವ ಸಾಮಾನುಗಳನ್ನು ಖರೀದಿಸಲಾಗಿದೆ. ಯಾವ ಧಾರಣೆಗೆ ಮತ್ತು ಯಾರಿಂದ ಕರೀದಿಸಲಾಗಿದೆ (ವಿವರ ನೀಡುವುದು)

ಶ್ರೀ ಉಮೇಶ್ ವಿ ಕತ್ತಿ (ಸಕ್ಕರೆ ಸಚಿವರು)

ಅ) 1994-95 ಹಾಗೂ 1995-96ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆ ಆಳಂದ ಸಕ್ಕರೆ ಕಾರ್ಕಾನೆಯು ಕಬ್ಬು ಸರಬರಾಜು ದಾರರಿಗೆ ಪಾವತಿಸಿದ ಹಣದ ವಿವರ ಈ ಕೆಳಕಂಡಂತೆ ಇದೆ :

(ಲಕ್ಷ ರೂ.ಗಳಲ್ಲಿ)

ವರ್ಷ		ಪಾವತಿಸಿದ ಹಣ		
		ಕಬ್ಬು ಸರಬರಾಜುದಾರರ ಸಂಖ್ಯೆ	ಪಾವತಿಸಿದ ಕಬ್ಬಿನ ಬೆಲೆ (ಟನ್ ಒಂದಕ್ಕೆ	ಪಾವತಿಸಿದ ಒಟ್ಟು ಮೊತ್ತ
1994-95	1)	676	760.00	458.91
	2)	790	510.00	354.62
	3)	2368	260.00	335.65

ಕ್ರಮಸಂಖ್ಯೆ: (2) ಮತ್ತು (3)ರಲ್ಲಿ ತೋರಿಸಿರುವ 3158 ಜನ ಕಬ್ಬು ಸರಬರಾಜುದಾರರಿಗೆ ಇನ್ನೂ ಬಾಕಿ ಪಾವತಿಸಬೇಕಾಗಿದೆ. ಕಾರ್ಖಾನೆಯ ಹಣಕಾಸಿ ಲಭ್ಯತೆಗೆ ಅನುಗುಣವಾಗಿ ಪಾವತಿಸಲಾಗುವುದು.

1995-96	2440	595.00	781.70

ಕಬ್ಬು ಸರಬರಾಜುದಾರರಿಗೆ ಪಾವತಿಸಬೇಕಾದಬಾಕಿ ಯಾವುದೂ ಇರುವುದಿಲ್ಲ.

ಆ) 1996-97ನೇ ಸಾಲಿನಲ್ಲಿ ಕಾರ್ಖಾನೆಯಲ್ಲಿ ಒಟ್ಟು 50,000 ಖಾಲಿ ಚೀಲಗಳನ್ನು ಪ್ರತಿ ಟೀಲಕ್ಕೆರೂ. 31.00 ರಂತೆ ಮೆ : ಪಿ. ಆರ್. ಐನಾಪುರ, ಗುಲ್ಬರ್ಗಾ ಇವರಿಂದ ಖರೀದಿಮಾಡಲಾಗಿದೆ.

ಇ) ವಿವರಗಳನ್ನು ತಯಾರಿಸಲಾಗುತ್ತಿದ್ದು, ಸಧ್ಯದಲ್ಲಿಯೇ ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ವಿಷಯ : ಗುಳೇದಗುಡ್ಡ ಕ್ಷೇತ್ರದಲ್ಲಿರುವ ಸಹಕಾರಿ ಸಂಘಗಳ ಮೂಲಕ ನೇಕಾರರ ಉತ್ತೇಜನ

1449 (1951)-ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿರುವ ನೇಕಾರರ ಸಹಕಾರ ಸಂಘಗಳೆಷ್ಟು?

ಆ) ಸರ್ಕಾರವು ಸಹಕಾರಿ ಸಂಘಗಳ ಮೂಲಕ ನೇಕಾರರ ಉತ್ತೇಜನಕ್ಕೆ ಕೈಗೊಂಡಿರುವ ಯೋಜನೆಗಳಾವುವು?

ಇ) ಸದರಿ ಯೋಜನೆಗಳಿಗಾಗಿ ಕಳೆದು ಮೂರು ವರ್ಷಗಳಿಂದ ಎಷ್ಟು ಹಣವನ್ನು ಒದಗಿಸಲಾಗಿದೆ?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು)

ಅ) 13

ಆ) ಸರ್ಕಾರವು ಸಹಕಾರ ಸಂಘಗಳ ಮೂಲಕ ನೇಕಾರರ ಉತ್ತೇಜನಕ್ಕೆ ಕೈಗೊಂಡಿರುವ ಯೋಜನೆಗಳು ಈ ಕೆಳಗಿನಂತಿವೆ :